ಅ) ಅನೇಕ ಮಂಡಲ ಪ್ರಧಾನರು ಮಂಡಲ ಪಂಚಾಯತ್ ಮೀಟಿಂಗ್‌ಗಳನ್ನು ನಿಯಮಿತವಾಗಿ ಕರೆಯದೇ ಇರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಗ್ರಾಮಸಬಾ ಮೀಟಿಂಗ್‌ಗಳನ್ನು ನಿಯಮಿತವಾಗಿ ನಡೆಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಹೌದು

ಆ) ಮಂಡಲ ಪಂಚಾಯತಿಯ ಪ್ರಧಾನರ ಅನಾಸಕ್ತಿಯ ಕಾರಣದಿಂದ.

ಇ) ಮಂಡಲ ಪಂಚಾಯತ್‌ಗಳು ಗ್ರಾಮಸಭೆಗಳನ್ನು ಕರೆಯುವುದು ಕಡ್ಡಾಯ ಕ್ರಮವಾಗಿ ಮಾಡಲು ಹಾಗೂ ಒಂದು ವೇಳೆ ಮಂಡಲ ಪಂಚಾಯತಿಯು ಗ್ರಾಮಸಭೆಗಳನ್ನು ಕರೆಯದಿದ್ದಾಗ ಸಂಬಂಧಿಸಿದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಮಂಡಲ ಪಂಚಾಯತಿಯ ಗ್ರಾಮಸಭೆಗಳನ್ನು ಕರೆಯಲು ಅಧಿಕಾರ ನೀಡಲು ಸರ್ಕಾರ ಪರಿಶೀಲಿಸುತ್ತಿದೆ.

ಕೋಲಾರ ಜಿಲ್ಲಾ ಪರಿಷತ್ತಿನಲ್ಲಿ ಸಿಮೆಂಟಿನ ಕೊರತೆ

323. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕೋಲಾರ ಜಿಲ್ಲಾ ಪರಿಷತ್ತಿನಲ್ಲಿ ಸಿಮೆಂಟಿನ ಅಭಾವದಿಂದಾಗಿ ನಿರ್ಮಾಣ ಕೆಲಸಗಳು ಸ್ಥಗಿತಗೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಈ ನಿರ್ಮಾಣ ಕಾರ್ಯಗಳನ್ನು ಸ್ಥಗಿತಗೊಳಿಸಲಾಗಿದೆ.

ಇ) ಸರ್ಕಾರ ಕೊಡಲೇ ಕೋಲಾರ ಜಿಲ್ಲಾ ಪರಿಷತ್ತಿನ ಅವಶ್ಯಕವಿರುವ ಸಿಮೆಂಟನ್ನು ಒದಗಿಸಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :–

ಅ) ಹೌದು

ಆ) 1990–91ನೇ ಸಾಲಿನ ಆರ್ಥಿಕ ವರ್ಷದಿಂದ.

ಇ) ದಿನಾಂಕ 17–11–90 ರಂದು ನಡೆದ ಜಿಲ್ಲಾ ಪರಿಷತ್ ಸಭೆಯಲ್ಲಿ ಸ್ಥಗಿತಗೊಂಡಿರುವ ಅಭಿವೃದ್ಧಿ ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸಲು ಮುಕ್ತ ಮಾರುಕಟ್ಟೆಯಲ್ಲಿ ಸಿಮೆಂಟನ್ನು ಖರೀದಿಸಲು ತೀರ್ಮಾನಿಸಲಾಗಿದೆ.